**<u>ದಿನಾಂಕಃ 04.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು</u>**

<u>ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರಿಂದಃ</u>

1. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುವುದಿಲ್ಲ. 2 ವರ್ಷಗಳ ನಂತರ ಕೇವಲ ಅಂಗನ್ಯೂನತೆ ಪರೀಕ್ಷಿಸುವ ಸಲುವಾಗಿ ಅರ್ಜಿದಾರರನ್ನು ಒಮ್ಮೆ ನೋಡಿರುತ್ತೇನೆ. ಅರ್ಜಿದಾರರಿಗೆ ಸಂಬಂದಿಸಿದ ಡಿಸ್ ಚಾರ್ಜ್ ಸಮ್ಮರಿ ಹೊರತುಪಡಿಸಿ ಬೇರೆ ದಾಖಲೆ ನೋಡಿರುವುದಿಲ್ಲ. ಅರ್ಜಿದಾರರಿಗೆ ಅದಂತಹ ಮೂಳೆ ಮುರಿತ ಕೂಡಿಕೊಂಡಿರುತ್ತದೆ. ಮೂಳೆ ಮೂರಿತ ಕೂಡಿಕೊಳ್ಳಲು 3 ತಿಂಗಳ ಕಾಲಾವಕಾಶ ಬೇಕು. ಅರ್ಜಿದಾರರಿಗೆ ಸ್ಟಿಟ್ನೇಸ್ ಯಾಕೆ ಇರುತ್ತದೆ ಎನ್ನುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಆರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನಾನು ಸಂಪರ್ಕಿಸಿರುವುದಿಲ್ಲ. ಅರ್ಜಿದಾರರಿಗೆ ಯಾವುದೇ ರೀತಿಯ ಮುಂದುವರೆದ ಚಿಕಿತ್ಸೆಗೆ ನಾನು ಸಲಹೆ ನೀಡಿರುವುದಿಲ್ಲ. ಅರ್ಜಿದಾರರಿಗೆ ಬಲಗೈಗೆ ಶೇ 28 ರಷ್ಟು ಅಂಗನ್ಯೂನತೆ ತಿಳಿಸಿದ್ದು ಅದು ಸಂಪೂರ್ಣ ದೇಹಕ್ಕೆ ಹೊಲಿಸಿದರೆ ಶೇ 10 ಕ್ಕಿಂತ ಕಡಿಮೆ ಬರುತ್ತದೆಂದರೆ ಸರಿ. ಅರ್ಜಿದಾರರಿಗೆ ಅದಂತಹ ಮೂಳೆ ಮುರಿತ ಕೂಡಿಕೊಂಡಿರುವ ಕಾರಣ ಅವರಿಗೆ ಯಾವುದೇ ರಿತಿಯ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಎಲ್ಲರಂತೆ ಅರೋಗ್ಯವಂತರಾಗಿದ್ದರೂ ಸಹಿತ ಅವರಿಗೆ ಸಹಾಯ ಮಾಡಲು ಹೆಚ್ಚಿನ ಪ್ರಮಾಣದ ಅಂಗನ್ಯೂನತೆ ತಿಳಿಸಿರುತ್ತೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2 ನೇ ಎದುರುದಾರರು ಏಕಪಕ್ಷಿಯವಾಗಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು